# ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಐವಾನ್-ಎ-ಶಾಹಿ ಬಡಾವಣೆ ಕಲಬುರಗಿ.

ಸಂಖ್ಯೆ: ಸಿ7(2)ಯೋ/ECCE, Bi-lingual & NSQF/08/2024-25 ದಿನಾಂಕ: 13.05.2024

## ಜ್ಞಾಪನ

ವಿಷಯ: 2024-25ನೇ ಶೈಕ್ಷಣಿಕ ಸಾಲಿನಲ್ಲಿ ಕಲ್ಯಾಣ-ಕರ್ನಾಟಕದ ಜಿಲ್ಲೆಗಳಲ್ಲಿ ಅರ್ಹ ಶಾಲೆಗಳಲ್ಲಿ ECCE, Bi-lingual ಹಾಗೂ NSQF ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ.

ಉಲ್ಲೇಖ:
1. ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ರವರ ಸುತ್ತೋಲೆ ಸಂಖ್ಯೆ ಕಕಪ್ರಾನು/ಯೋಶಿ/ಸಶಿಯೋ/01/2023-24 ದಿನಾಂಕ 21.09.2023.
2. ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ರವರ ಸುತ್ತೋಲೆ ಸಂಖ್ಯೆ ಕಕಪ್ರಾನು/ಯೋಶಿ/ಸಶಿಯೋ/01/2023-24 ದಿನಾಂಕ 19.01.2024.
3. ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ 03.05.2024 ರಂದು ನಡೆದ ಸಭೆಯ ನಡಾವಳಿಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶೈಕ್ಷಣಿಕ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು 2023-24ರ ವರ್ಷವನ್ನು ಶೈಕ್ಷಣಿಕ ವರ್ಷವೆಂದು ಘೋಷಿಸಿದೆ. ಶಿಕ್ಷಣ ವಲಯದ ಸಮಗ್ರ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು 'ಅಕ್ಷರ ಆವಿಷ್ಕಾರ' ಎಂಬ ಕಾರ್ಯಕ್ರಮ ರೂಪಿಸಿದೆ. ಸದರಿ ಯೋಜನೆಯಡಿಯಲ್ಲಿ ಈಗಾಗಲೇ ಅರ್ಹತೆಯ ಮೇರೆಗೆ ಬಹಳಷ್ಟು ಶಾಲೆಗಳಲ್ಲಿ ECCE, Bi-lingual ಹಾಗೂ NSQF ತರಗತಿಗಳು ಪ್ರಾರಂಭಿಸಲು ಪ್ರಸ್ತಾಪಿಸಲಾಗಿರುತ್ತದೆ.

ಅರ್ಹ ಶಾಲೆಗಳಲ್ಲಿ ಮೇಲ್ಕಂಡ ವಿಷಯಗಳಿಗಾಗಿ ಹೊಸ ತರಗತಿಗಳನ್ನು ಪ್ರಾರಂಭಿಸಲು 2024-25 ನೇ ಶೈಕ್ಷಣಿಕ ಸಾಲಿನ ಆರಂಭಿಕ ದಿನಾಂಕವಾದ ಮೇ 29, 2024 ರ ಒಳಗಾಗಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ಪ್ರತಿ ತಾಲೂಕಿಗೆ ಅಂದಾಜು 30 ಪ್ರಾಥಮಿಕ ಶಾಲೆಗಳಲ್ಲಿ ECCE ಹಾಗೂ Bi-lingual ತರಗತಿಗಳನ್ನು ಹಾಗೂ 10 ಪ್ರೌಢ ಶಾಲೆಗಳಲ್ಲಿ NSQF ತರಗತಿಗಳನ್ನು ಪ್ರಾರಂಭಿಸಲು ಅರ್ಹತೆ ಹೊಂದಿರುತ್ತದೆ.

ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ECCE, Bi-Lingual ಹಾಗೂ NSQF ತರಗತಿಗಳನ್ನು ಪ್ರಾರಂಭಿಸಲು ಕಾಲಕಾಲಕ್ಕೆ ರಾಜ್ಯ ಸರಕಾರ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ಅದೇ ಮಾನದಂಡಗಳನ್ನು ಮುಂಬರುವ 2024-25ನೇ ಶೈಕ್ಷಣಿಕ ಸಾಲಿನಲ್ಲಿ ತಾವುಗಳು ಪ್ರಾರಂಭಿಸಲು ಇಚ್ಛಿಸಿರುವ ಶಾಲೆಗಳಲ್ಲಿಯೂ ಸಹ ಪಾಲಿಸಬೇಕಾಗುತ್ತದೆ. ಆದ್ದರಿಂದಲೇ, ತಮ್ಮ ಅನುಕೂಲಕ್ಕಾಗಿ ಮಾರ್ಗಸೂಚಿಗಳನ್ನು ಮೊತ್ತೊಮ್ಮೆ ಪುನರುಚ್ಚರಿಸುತ್ತಾ, ಅರ್ಹತೆ ಹೊಂದಿರುವ ಶಾಲೆಗಳಲ್ಲಿ ಅಳವಡಿಸಿಕೊಳ್ಳಲು ಈ ಮೂಲಕ ತಿಳಿಸಿದೆ.

**A. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) ತರಗತಿಗಳನ್ನು ಅರ್ಹ ಶಾಲೆಗಳಲ್ಲಿ 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸುವ ಬಗ್ಗೆ ಈ ಕೆಳಗಿನ ಮಾನದಂಡಗಳಂತೆ ಕ್ರಮವಹಿಸುವುದು.**

**1. (ECCE) ಆರಂಭಿಸುವ ಶಾಲೆಗಳಲ್ಲಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಕುರಿತು.**

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದೆ.

a. ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ D.P.S.E (Diploma in Pre-School Education) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಆದ್ಯತೆಯ ಮೇರೆಗೆ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದು.
b. ಮೇಲ್ಕಂಡ ಅರ್ಹತೆ ಹೊಂದಿದವರು ಲಭ್ಯವಿಲ್ಲದಿದ್ದಲ್ಲಿ, PUC ಜೊತೆಗೆ ಅಥವಾ D.Ed ಹೊಂದಿರುವ ವಿದ್ಯಾರ್ಹತೆ ನಂತರದ ಆಧ್ಯತೆಯ ಮೇರೆಗೆ ನೇಮಕಾತಿ ಮಾಡಿಕೊಳ್ಳುವುದು.
c. ಮೇಲ್ಕಂಡ ಅರ್ಹತೆ ಹೊಂದಿದವರು ಲಭ್ಯವಿಲ್ಲದಿದ್ದಲ್ಲಿ, B.Ed ವಿದ್ಯಾರ್ಹತೆ ಹೊಂದಿರುವವರನ್ನು ತದನಂತರದ ಅದ್ಯತೆಯ ಮೇರೆಗೆ ನೇಮಕಾತಿ ಮಾಡಿಕೊಳ್ಳುವುದು.
d. ಅತಿಥಿ ಶಿಕ್ಷಕರ ಆಯ್ಕೆಯ ಜವಾಬ್ದಾರಿಯನ್ನು ಸಂಬಂಧಿಸಿದ ಸರಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ ರವರ ಸಹಯೋಗದೊಂದಿಗೆ ಹೊರತಕ್ಕದು.
e. ಅತಿಥಿ ಶಿಕ್ಷಕರ ಹಾಜರಾತಿ ವಹಿಯನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.
f. ಪೂರ್ವ ಪ್ರಾಥಮಿಕ ಶಾಲಾ ಅತಿಥಿಶಿಕ್ಷಕರಿಗೆ ಮಾಹೆಯಾನ ರೂ: 10,000/- ಗೌರವ ಸಂಭಾವನೆ ನಿಗದಿಪಡಿಸಲಾಗಿದೆ.
g. ಇನ್ನುಳಿದಂತೆ, ಪೂರ್ವ ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ಅನ್ವಯಿಸುವ ಎಲ್ಲಾ ಸರ್ಕಾರದ ನಿರ್ದೇಶನಗಳು ಹಾಗೂ ಷರತ್ತುಗಳನ್ನು ಸದರಿ ಅತಿಥಿ ಶಿಕ್ಷಕರ ನೇಮಕಾತಿಯಲ್ಲಿಯೂ ಸಹ ಪಾಲನೆ ಮಾಡುವುದು ಕಡ್ಡಾಯವಾಗಿರುತ್ತದೆ.

**2. ಇದೇ ರೀತಿಯಲ್ಲಿ, ಪ್ರತಿಯೊಂದು ECCE ತರಗತಿಗೂ ಒಬ್ಬರು ಸಹಾಯಕಿಯನ್ನು (ಆಯಾ) ನೇಮಕಾತಿ ಮಾಡಿಕೊಳ್ಳುವ ಕುರಿತು.**

a. 50 ವರ್ಷದೊಳಗಿನ ಮಹಿಳೆಯನ್ನು ಸಹಾಯಕಿಯಾಗಿ ನೇಮಕ ಮಾಡಿಕೊಳ್ಳುವುದು.
b. ಆರೋಗ್ಯಕರವಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು, ಅಂತಹ ಮಹಿಳೆಯನ್ನು ಆದ್ಯತೆಯ ಮೇರೆಗೆ ಸಹಾಯಕಿ(ಆಯಾ) ಯಾಗಿ ನೇಮಕ ಮಾಡಿಕೊಳ್ಳತಕ್ಕದ್ದು.
c. ಸಹಾಯಕಿಯವರಿಗೆ ಮಾಹೆಯಾನ ರೂ: 5000/- ಗೌರವ ಸಂಭಾವನೆ ನಿಗದಿಪಡಿಸಲಾಗಿದೆ.
d. ಸಹಾಯಕಿಯವರ ಆಯ್ಕೆಯ ಜವಾಬ್ದಾರಿಯನ್ನು ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ ರವರ ಸಹಯೋಗದೊಂದಿಗೆ ಹೊರತಕ್ಕದ್ದು.
e. ಅತಿಥಿ ಶಿಕ್ಷಕರ ಹಾಜರಾತಿ ವಹಿಯಲ್ಲಿಯೇ ಸಹಾಯಕಿಯವರ ಹಾಜರಾತಿಯನ್ನು ನಿರ್ವಹಿಸುವುದು.

**3. ECCE ಪ್ರಾರಂಭಿಸುವ ಶಾಲೆಗಳ ವ್ಯಾಪ್ತಿಯಲ್ಲಿ ವಿಷಯದ ಕುರಿತು ವ್ಯಾಪಕವಾಗಿ ಪ್ರಚಾರ ಮಾಡುವುದು.**

ಸದರಿ ವಿನೂತನವಾಗಿ ಪ್ರಾರಂಭಿಸುವ ECCE ತರಗತಿಯ ಕುರಿತು ಜಿಲ್ಲಾಮಟ್ಟ, ತಾಲೂಕು ಮಟ್ಟ, ಹೋಬಳಿ ಮಟ್ಟ ಹಾಗೂ ಗ್ರಾಮ ಪಂಚಾಯತಿ ಅಡಿಯಲ್ಲಿ ಬರುವ ಗ್ರಾಮಗಳಲ್ಲಿ ಹೆಚ್ಚಿನ ಪ್ರಚಾರ ಮಾಡುವಂತೆ ಕ್ರಮವಹಿಸತಕ್ಕದ್ದು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಯವರ ಸಹಯೋಗ ಹಾಗೂ ಮಾರ್ಗದರ್ಶನ ಪಡೆದು ಕೊಳ್ಳುವುದು.

4. **ECCE ಮಕ್ಕಳ ದಾಖಲಾತಿ ಕುರಿತು.**

ECCE ತರಗತಿಗೆ ಅರ್ಹವಿರುವ ಶಾಲೆಗಳಲ್ಲಿ LKG ಗೆ ಗರಿಷ್ಠ 30 ಮಕ್ಕಳು ಹಾಗೂ UKG ಗೆ ಗರಿಷ್ಠ 30 ಮಕ್ಕಳು ದಾಖಲಾತಿಯನ್ನು ಸಾಧಿಸುವ ನಿಟ್ಟಿನಲ್ಲಿ ಕ್ರಮವಹಿಸುವುದು. LKG ಹಾಗೂ UKG ತರಗತಿಗಳು ಎರಡೂ ಸೇರಿ ಕನಿಷ್ಠ 20 ಮಕ್ಕಳು ದಾಖಲಾದಲ್ಲಿ ಮಾತ್ರ ತರಗತಿ ಆರಂಭಿಸಲು ಸೂಕ್ತವಿರುತ್ತದೆ. LKG ಹಾಗೂ UKG, ಪ್ರತಿ ತರಗತಿಗೆ ಕನಿಷ್ಠ 10 ಮಕ್ಕಳು ದಾಖಲಾಗವುದು ಅವಶ್ಯವಿರುತ್ತದೆ. LKG ತರಗತಿಗೆ ದಾಖಲಾಗುವ ಕುರಿತು ಮಗುವಿನ ವಯಸ್ಸು ಕನಿಷ್ಠ 4+ ಅಗಿರಬೇಕು. ಅಂತೆಯೆ, UKGಗೆ 5+ ವಯಸ್ಸು ಅಗಿರಬೇಕು. ಮಗುವಿನ ವಯಸ್ಸಿನ ಅನುಗುಣವಾಗಿ UKG ಗೆ ಕೂಡಾ ನೇರವಾಗಿ ದಾಖಲು ಮಾಡಿಕೊಳ್ಳಬಹುದಾಗಿದೆ.

5. **ECCE ಪ್ರಾರಂಭಿಸಲು ಅನುವಾಗುವ ಮೂಲಭೂತ ಸೌಲಭ್ಯಗಳ ಪೂರ್ವಸಿದ್ಧತೆ ಮಾಡಿಕೊಳ್ಳುವುದು.**

**a)** ಪೂರ್ವ ಪ್ರಾಥಮಿಕ ಶಾಲಾ ಮಕ್ಕಳು ತಮ್ಮ ಕಲಿಕೆಯ ಪ್ರಯಾಣವನ್ನು ಪ್ರಾರಂಭಿಸಿರುತ್ತಾರೆ. ಸಕಾರಾತ್ಮಕ ಮತ್ತು ಉತ್ತೇಜಿತ ಕಲಿಕೆಯ ಪರಿಸರವನ್ನು ಒದಗಿಸುವುದು. ಅರ್ಹವಿರುವ ಶಾಲೆಯಲ್ಲಿ LKG ಮತ್ತು UKG ತರಗತಿ ಪ್ರಾರಂಭಿಸಲು ಕೊಠಡಿ ವ್ಯವಸ್ಥೆ ಸಮೇತ ಎಲ್ಲಾ ಮೂಲಭೂತ ಸೌಕರ್ಯಗಳ ಕುರಿತಾಗಿ ಪೂರ್ವಸಿದ್ಧತಾ ಕ್ರಮಗಳನ್ನು ತೆಗೆದುಕೊಳ್ಳುವುದು.

**b) ಕಲಿಕಾ ವಾತಾವರಣವನ್ನು ಸೃಷ್ಟಿಸಲು ಅಗತ್ಯವಿರುವು ಅಂಶಗಳು:**

1. ಬಾಲಾ ವೈಶಿಷ್ಟ್ಯಗಳವುಳ್ಳ (Bala Features) ತರಗತಿ ಕೊಠಡಿ (ಗೋಡೆ ಬರಹ –ಮಕ್ಕಳಿಗೆ ಆಕರ್ಷಣೀಯ ಕಾರ್ಟೂನ್ ಪಾತ್ರಗಳು, ಬಣ್ಣಗಳು, ಪ್ರಾಣಿಗಳು, ತರಕಾರಿ ಹಣ್ಣುಗಳು ಇತ್ಯಾದಿ.
2. ಮಗು ಸ್ನೇಹಿ ಪೀಠೋಪಕರಣಗಳು.
3. ಆಟ ಮತ್ತು ಕಲಿಯುವ ಮೂಲೆಗಳು(ಪೂರ್ವ ಸಾಕ್ಷರತಾ ಆಟಿಕೆಗಳು/ಪೂರ್ವ ಸಂಖ್ಯಾಜ್ಞಾನ ಆಟಿಕೆಗಳು/ಬಿಲ್ಡಿಂಗ್ ಬ್ಲಾಕ್ಸ್/ಪಜಲ್ಸ್/ಪುಸ್ತಕಗಳು/ಕಾರ್ಡುಗಳು.
4. ಹೊರಾಂಗಣ ಆಟದ ಪರಿಕರಗಳು.
5. ಮರಳು ಗುಂಡಿ (sandpit).

6. **ಕಲಿಕಾ ಕಿಟ್ಗಳ ಬೇಡಿಕೆ ಸಲ್ಲಿಸುವ ಕುರಿತು.**

ಮಕ್ಕಳ ಸಂಖ್ಯೆಯನ್ನಾಧರಿಸಿ, ಭೋದನಾ ಕಲಿಕಾ ಸಾಮಾಗ್ರಿಗಳಾದ (TLM) ಕಲಿಕಾ ಕಿಟ್‌ಗಳ ಬೇಡಿಕೆ ಪಟ್ಟಿಯನ್ನು ಉಪ ನಿರ್ದೇಶಕರು (ಆಡಳಿತ) ರವರು ಸಂಬಂಧಿಸಿದ ತಾಲೂಕುಗಳಿಂದ ಪಡೆದು ಕ್ರೋಢಿಕರಣ ಮಾಡಿ ಸಕಾಲದಲ್ಲಿ ಈ ಕಛೇರಿಗೆ ಹಾಗೂ ಸರ್ಕಾರಕ್ಕೆ ಸಲ್ಲಿಸುವುದು.

7. **ನೇಮಕಗೊಂಡ ಅತಿಥಿ ಶಿಕ್ಷಕರ ತರಬೇತಿ ಪ್ರಕ್ರಿಯೆ ಬಗ್ಗೆ.**

ಸದರಿ ECCE ತರಗತಿ ಪ್ರಾರಂಭಿಸುವ ಶಾಲೆಗಳಿಗೆ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಜೂನ್-2024 ಮಾಹೆಯನ್ನು ಒಳಗೊಂಡಂತೆ ಅಜೀಂ ಪ್ರೇಮಜಿ ಫೌಂಡೇಶನ್ ಹಾಗೂ ರಾಕೆಟ್ ಲರ್ನಿಂಗ ಫೌಂಡೇಶನ್ ರವರ ಸಹಯೋಗದೊಂದಿಗೆ ಡಯಟ್ ಪ್ರಾಂಶುಪಾಲರ ಮೇಲುಸ್ತುವಾರಿಯಲ್ಲಿ ತರಬೇತಿ ಪ್ರಕ್ರಿಯೆಯನ್ನು ಕೈಗೊಳ್ಳುವುದು.

**B. ಅರ್ಹ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ಇರುವ ಕನ್ನಡ ಮಾಧ್ಯಮದ ಜೊತೆಗೆ 1ನೇ ತರಗತಿಗೆ ಹೆಚ್ಚುವರಿ ಆಂಗ್ಲ ಮಾಧ್ಯಮದ ವಿಭಾಗವನ್ನು ಪ್ರಾರಂಭಿಸುವ ಕುರಿತು ಅನುಸರಿಸಬೇಕಾದ ಮಾನದಂಡಗಳು.**

ಇಂಗ್ಲೀಷ ಮಾಧ್ಯಮ (Bi-lingual) ಶಾಲೆ ಪ್ರಾರಂಭಿಸುವ ಸಂಬಂಧ ಈ ಕೆಳಕಾಣಿಸಿರುವ ಮಾನದಂಡಗಳನ್ವಯ ಕ್ರಮವಹಿಸತಕ್ಕದ್ದು.

**1. ಶಿಕ್ಷಕರ ನೇಮಕಾತಿ: -**

a. ಒಂದನೇ ತರಗತಿಗೆ ಅರ್ಹಶಾಲೆಗಳಲ್ಲಿ ಅತಿಥಿ ಶಿಕ್ಷಕರು ಓರ್ವರನ್ನು ತ್ವರಿತವಾಗಿ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಉಪನಿರ್ದೇಶಕರು ತಾಲೂಕುವಾರು ಇಲಾಖೆ ಸೂಚಿಸಲ್ಪಟ್ಟ ಮಾಹಿತಿಯನ್ವಯ ಕೂಡಲೇ ಕ್ರಮವಹಿಸುವುದು.

b. ಸದರಿ ಶಾಲೆಗಳಿಗೆ ಸಂಬಂಧಿಸಿದಂತೆ ಅತಿಥಿ ಶಿಕ್ಷಕರು ಆಯ್ಕೆಯ ಜವಾಬ್ದಾರಿಯನ್ನು ಸಂಬಂಧಿಸಿದ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಗುರುಗಳು ಎಸ್.ಡಿ.ಎಮ್.ಸಿ ರವರ ಸಹಯೋಗದೊಂದಿಗೆ ನಿರ್ವಹಿಸುವುದು.

c. ಒಂದನೇ ತರಗತಿ ಇಂಗ್ಲೀಷ ಮಾಧ್ಯಮಕ್ಕೆ ಅತಿಥಿ ಶಿಕ್ಷಕರ ಆಯ್ಕೆಗೆ ಕನಿಷ್ಠ ವಿದ್ಯಾರ್ಹತೆ:

- ಪಿ.ಯು.ಸಿ ಯ ವರೆಗೆ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿ D.EL.Ed (Diploma in Elementary Education) ಯನ್ನು ಸಹ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿದವರಿಗೆ ಮೊದಲ ಆದ್ಯತೆ ನೀಡುವುದು.
- ಪಿ.ಯು.ಸಿ ಯ ವರೆಗೆ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ಜೊತೆಗೆ D.EL.Ed ಮಾಡಿದವರಿಗೆ ನಂತರದ ಆದ್ಯತೆ ನೀಡುವುದು.
- ಒಂದು ವೇಳೆ ಮೇಲಿನ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಪದವಿಯಲ್ಲಿ 'ಆಂಗ್ಲ ಭಾಷೆ' ಯನ್ನು ಒಂದು ಐಚ್ಛಿಕ (optional) ವಾಗಿ ಅಧ್ಯಯನ ಮಾಡಿ B.Ed. ಪದವಿ ಮಾಡಿದವರಿಗೆ ನಂತರದ ಆದ್ಯತೆ ನೀಡುವುದು.

d. ಸದರಿ ಅತಿಥಿ ಶಿಕ್ಷಕರ ಹಾಜರಾತಿ ವಹಿಯನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.

e. ಸದರಿ ಅತಿಥಿ ಶಿಕ್ಷಕರಿಗೆ ಮಾಹೆಯಾನ ರೂ.10000/- ಗೌರವ ಸಂಭಾವನೆ ನಿಗಧಿಪಡಿಸಲಾಗಿದೆ.

f. ಇನ್ನುಳಿದಂತೆ ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ಪಾಲಿಸುವ ಸರ್ಕಾರದ ನಿರ್ದೇಶನಗಳು ಹಾಗೂ ಷರತ್ತುಗಳನ್ನು, ಸದರಿ ಅತಿಥಿ ಶಿಕ್ಷಕರ ನೇಮಕಾತಿಯಲ್ಲಿಯೂ ಸಹ ಪಾಲನೆ ಮಾಡುವುದು ಕಡ್ಡಾಯವಾಗಿರುತ್ತದೆ.

**2. ಇಂಗ್ಲಿಷ ಮಾಧ್ಯಮ(Bi-lingual) ಪ್ರಾರಂಭಿಸುವ ಸರಕಾರಿ ಶಾಲೆಗಳ ದಾಖಲಾತಿ ಗುರಿ ಹೆಚ್ಚಿಸಲು ವ್ಯಾಪಕವಾಗಿ ಪ್ರಚಾರ ಮಾಡುವ ಬಗ್ಗೆ.**

- ಶಾಲೆಯಲ್ಲಿ ಇಂಗ್ಲಿಷ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳುವ ಆಸಕ್ತ ವಿದ್ಯಾರ್ಥಿಗಳ ಸಂಖ್ಯೆಯು ಗರಿಷ್ಠ 30 ಆಗಿರಬೇಕು ಮತ್ತು ಇದ್ದರಿಂದಾಗಿ ಪ್ರಸ್ತುತ ನಡೆಯುತ್ತಿರುವ ಮಾಧ್ಯಮಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕು.
- ಈ ಶಾಲೆಗಳಲ್ಲಿ ಗರಿಷ್ಠ 30 ಹಾಗೂ ತರಗತಿ ಪ್ರಾರಂಭಿಸಲು ಬೇಕಾಗುವ ಕನಿಷ್ಠ 20 ಮಕ್ಕಳ ದಾಖಲಾತಿಯ ಗುರಿಯನ್ನು ಸಾಧಿಸಲು ಹೆಚ್ಚು ಪ್ರಚಾರ ಮಾಡುವ ನಿಟ್ಟಿನಲ್ಲಿ ವಿಭಾಗದ ಎಲ್ಲಾ ಉಪ ನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಕ್ರಿಯರಾಗಬೇಕು.

3. ಇಂಗ್ಲಿಷ ಮಾಧ್ಯಮ (Bi-lingual) ಪ್ರಾರಂಭಕ್ಕೆ ಮೂಲಭೂತ ಸೌಲಭ್ಯದ ಕುರಿತು.

ಸದರಿ ಶಾಲೆಯಲ್ಲಿ ಈಗಾಗಲೇ ಲಭ್ಯವಿರುವ ಕಟ್ಟಡ & ಮೂಲಭೂತ ಸೌಕರ್ಯಗಳಲ್ಲಿಯೇ ಸಾಧ್ಯವಾದಷ್ಟು ಆಂಗ್ಲ ಮಾಧ್ಯಮ ಹೆಚ್ಚುವರಿ ವಿಭಾಗವನ್ನು ನಡೆಸುವುದು.

4. ನೇಮಕಗೊಂಡ ಅತಿಥಿ ಶಿಕ್ಷಕರ ತರಬೇತಿ ಪ್ರಕ್ರಿಯೆ ಬಗ್ಗೆ.

ಸದರಿ ದ್ವಿ-ಭಾಷಾ ಮಾಧ್ಯಮ ಶಾಲೆಗಳಿಗೆ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಜೂನ್-2024 ಮಾಹೆಯನ್ನು ಒಳಗೊಂಡಂತೆ ಡಯಟ್‌ಗಳ ಮೂಲಕ EMTIP-1 ತರಬೇತಿ ಪ್ರಕ್ರಿಯೆಯನ್ನು ಸಂಪನ್ಮೂಲ ವ್ಯಕ್ತಿಗಳನ್ನು(MRP) ಬಳಸಿಕೊಂಡು ಕೈಗೊಳ್ಳುವುದು.

5. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಆಂಗ್ಲ ಮಾಧ್ಯಮದ ಪಠ್ಯ ಪುಸ್ತಕಗಳ ಬೇಡಿಕೆ ಪಟ್ಟಿಯನ್ನು ಸಕಾಲದಲ್ಲಿ ಸಲ್ಲಿಸುವುದು.

6. ಇಂಗ್ಲೀಷ ಮಾಧ್ಯಮ (Bi-lingual) ಶಾಲೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ವಿವರವನ್ನು ಎಸ್.ಎ.ಟಿ.ಎಸ್. ನಲ್ಲಿ ಇಂದೀಕರಿಸಲು ಕ್ರಮವಹಿಸುವುದು.

7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರವರ ಮಾರ್ಗದರ್ಶನದಲ್ಲಿ ಹೆಚ್ಚುವರಿ ಮೂಲಭೂತ ಸೌಕರ್ಯಗಳ ಅವಶ್ಯಕತೆ ಇದ್ದಲ್ಲಿ ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರ ಗಮನಕ್ಕೆ ತಂದು ವ್ಯವಸ್ಥೆ ಮಾಡಿಕೊಳ್ಳಲು ಕಾರ್ಯಪ್ರವೃತ್ತರಾಗುವುದು.

**C. ಸರ್ಕಾರಿ ಪ್ರೌಢ ಶಾಲೆಗಳಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು National Skill Qualification Frame Work (NSQF) ಸೆಕ್ಟರ್ ಗಳನ್ನು 9ನೇ ತರಗತಿಯಿಂದ ಪ್ರಾರಂಭಿಸಲು ಅನುಸರಿಸಬೇಕಾದ ಮಾನದಂಡಗಳು.**

ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು National Skill Qualification Frame Work (NSQF) ಸರ್ಕಾರದ ಯೋಜನೆಯಾಗಿರುತ್ತದೆ. ಈ ಯೋಜನೆಯನ್ನುಸರ್ಕಾರಿ ಶಾಲೆಗಳಲ್ಲಿ ತರಗತಿ 9 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ಅನುಷ್ಠಾನಗೊಳಿಸಲಾಗಿದೆ. **ಈ ಯೋಜನೆಯ ಮುಖ್ಯ ಉದ್ದೇಶ ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣದ ವಿಷಯಗಳನ್ನುವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಅಳವಡಿಸಿ, ಉದ್ಯೋಗ ನಿರ್ವಹಿಸಲು ಅಗತ್ಯ ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಬಗ್ಗೆ ತರಬೇತಿಯನ್ನು ನೀಡುವುದಾಗಿದೆ.** ಪಠ್ಯ ವಿಷಯ ಸಿದ್ಧಪಡಿಸುವುದರಿಂದ ಹಿಡಿದು ತರಬೇತಿದಾರರ ಆಯ್ಕೆ ತರಬೇತಿ ಮೌಲ್ಯ ಮಾಪನ ಪ್ರಮಾಣ ಪತ್ರ ಮತ್ತು ಉದ್ಯೋಗ ದೊರಕಿಸಿ ಕೊಡುವವರೆಗೂ ಉದ್ಯಮದಾರರ ಸಹಭಾಗಿತ್ವದಲ್ಲೇ ನಿರ್ವಹಿಸುವುದಾಗಿರುತ್ತದೆ.

2024-25 ನೇ ಶೈಕ್ಷಣಿಕ ಸಾಲಿನಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಅರ್ಹವಿರುವ ಪ್ರೌಢ ಶಾಲೆಗಳಲ್ಲಿ ಎರಡು ಹೊಸ ಸೆಕ್ಟರ್‌ಗಳನ್ನು (ವಿಷಯಗಳನ್ನು) ಪ್ರಾರಂಭಿಸಬಹುದಾಗಿದೆ. ಜಿಲ್ಲೆಯ ಉಪ ನಿರ್ದೇಶಕರು ಅನುಸರಿಸಬೇಕಾದ ಮಾನದಂಡಗಳು ಈ ಕೆಳಕಂಡಂತಿದೆ.

1. ಅರ್ಹ ಶಾಲೆಗಳಲ್ಲಿ 9ನೇ ತರಗತಿಯಿಂದ ವಿದ್ಯಾಥಿಗಳಿಗೆ ಕೆಳಕಂಡ ಸೆಕ್ಟರ್ (ವಿಷಯ) ಗಳನ್ನು ಅಭ್ಯಾಸಿಸಲು ಅವಕಾಶ ಇದ್ದು, ಇವುಗಳಲ್ಲಿ ಒಂದು ಸೆಕ್ಟರ್ (ವಿಷಯ) Information Technology (IT/ITES) (ಮಾಹಿತಿ ತಂತ್ರಜ್ಞಾನ) ಅನ್ನು ಆಯ್ಕೆ ಮಾಡುವುದು **ಕಡ್ಡಾಯ**ವಾಗಿರುತ್ತದೆ. ಇದನ್ನು ಹೊರತುಪಡಿಸಿ, ಅರ್ಹ ಶಾಲೆಗಳಲ್ಲಿ ಕೆಳಕಂಡ ವಿಷಯಗಳನ್ನು ಪ್ರಾರಂಭಿಸಬಹುದಾಗಿದೆ.

| ಕ್ರ. ಸಂ | ವಿಷಯ (ಸೆಕ್ಟರ್) | ಕ್ರ. ಸಂ | ವಿಷಯ (ಸೆಕ್ಟರ್) |
|---|---|---|---|
| 1 | Information Technology (IT/ITES) (ಮಾಹಿತಿ ತಂತ್ರಜ್ಞಾನ) | 6 | Retail (ರಿಟೇಲ್) |
| 2 | Automobile (ಆಟೋಮೊಬೈಲ್) | 7 | Agriculture (ಕೃಷಿ) |
| 3 | Beauty and Wellness (ಬ್ಯೂಟಿ ಮತ್ತು ವೆಲನೆಸ್) | 8 | Hospitality (ಹಾಸ್ಪಿಟ್ಯಾಲಿಟಿ) |
| 4 | Electronics and Hardware (ಎಲೆಕ್ಟ್ರಾನಿಕ್ಸ್ ಮತ್ತು ಹಾರ್ಡವೇರ್) | 9 | Media & Entertainment (ಪತ್ರಿಕಾ ಮಾಧ್ಯಮ & ಮನೋರಂಜನೆ) |
| 5 | Apparels Made-ups and Home Furnishing (ಅಪ್ಯಾರಲ್ಸ್, ಮೇಡ್ ಅಪ್ಸ್ & ಹೋಮ್ ಫರ್ನಿಷಿಂಗ್) | 10 | Health Care (ಹೆಲ್ತ್ ಕೇರ್) |

**2.** ಅರ್ಹವಿರುವ ಪ್ರೌಢ ಶಾಲೆಗಳಲ್ಲಿ 9 ಮತ್ತು 10ನೇ ತರಗತಿಯಲ್ಲಿ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದಾರ್ಥಿಯು ತೃತೀಯ ಭಾಷೆ ಬದಲು ಆಯಾ ಶಾಲೆಯಲ್ಲಿ ಒದಗಿಸಲಾಗುವ ಎರಡು ಸೆಕ್ಟರ್ (ವಿಷಯ) ಗಳಲ್ಲಿ ಒಂದು ಸೆಕ್ಟರ (ವಿಷಯ) ವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

**3.** ಪ್ರತಿ ಸೆಕ್ಟರ್‌ಗೆ ಗರಿಷ್ಠ 25 ವಿದ್ಯಾರ್ಥಿಗಳಂತೆ ಪ್ರತಿ ಶಾಲೆಯಲ್ಲಿಯೂ 02 ವಿಷಯಗಳನ್ನು ಒಳಗೊಂಡಂತೆ ಗರಿಷ್ಠ 50 ವಿದ್ಯಾರ್ಥಿಗಳನ್ನು ನೊಂದಾಯಿಸಿಕೊಳ್ಳಲು ಅವಕಾಶವಿದೆ. ಯಾವುದೇ ವಿಷಯವನ್ನು ಪ್ರಾರಂಭಿಸಲು ಕನಿಷ್ಠ 20 ವಿದ್ಯಾರ್ಥಿಗಳು ನೊಂದಾಯಿಸಬೇಕಾಗುತ್ತದೆ. ಅದಕ್ಕಾಗಿ ನೊಂದಣಿ ಆಧಾರದ ಮೇಲೆ ಆಯ್ಕೆ ಮಾಡಲಾದ 2ನೇ ವಿಷಯದ ಮಾಹಿತಿಯನ್ನು ನಮ್ಮ ಕಛೇರಿಗೆ ತ್ವರಿತವಾಗಿ ಒದಗಿಸುವುದು.

**4.** ಸದರಿ ಸೆಕ್ಟರ್‌ಗಳನ್ನು ಬೋಧಿಸುವ ಶಿಕ್ಷಕರು/ ತರಬೇತುದಾರರನ್ನು ಮತ್ತು ಸಂಬಂಧಿಸಿದ ಪಠ್ಯ-ಕ್ರಮ ಮತ್ತು ಪರೀಕ್ಷಾ ಕ್ರಮಗಳ ಬಗ್ಗೆಯೂ ಸಹ ಸರ್ಕಾರವು ಒದಗಿಸುತ್ತದೆ. ಸದರಿ ತರಬೇತುದಾರರು ನಿರ್ದೇಶನ / ಮಾರ್ಗದರ್ಶನ ನೀಡಲಿದ್ದಾರೆ.

**5.** ವೃತ್ತಿ ಶಿಕ್ಷಣವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ತಾತ್ವಿಕ ಥಿಯರಿ ಪರೀಕ್ಷೆಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಯೂ ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಸೆಕ್ಟರ್ ಸ್ಕಿಲ್ ಕೌನ್ಸಿಲಿಂಗ್ ಸಂಸ್ಥೆಗಳ ಮೂಲಕ ನಡೆಸಲಾಗುವುದು.

**6.** ವೃತ್ತಿ ಶಿಕ್ಷಣದ ವಿಷಯವನ್ನು ವಿನಾಯಿತಿ ಪಡೆದ ತೃತೀಯ ಭಾಷೆಗೆ ಸಮಾನಾಂತರ ಎಂದು ಪರಿಗಣಿಸುವುದು. ವಿದ್ಯಾರ್ಥಿಯು 9ನೇ ತರಗತಿಯಲ್ಲಿ ತೃತೀಯ ಭಾಷೆಯ ಬದಲು ಮಾಹಿತಿ ತಂತ್ರಜ್ಞಾನ ಅಥವಾ ತಾನು ಆಯ್ಕೆ ಮಾಡಿಕೊಂಡ ಯಾವುದೇ ಸೆಕ್ಟರ್(ವಿಷಯ) ಗಳಲ್ಲಿ 10ನೇ ತರಗತಿಯಲ್ಲಿಯೂ ಮುಂದುವರಿಯುವುದು. 9ನೇ ತರಗತಿಯಲ್ಲಿ ಆಯ್ಕೆ ಮಾಡಿಕೊಂಡ ವಿಷಯವನ್ನು 10ನೇ ತರಗತಿಯಲ್ಲಿ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

**7.** NSQF ವಿಷಯವನ್ನು ಆಯ್ಕೆ ಮಾಡಿಕೊಂಡಿರುವ 9ನೇ ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ 3ನೇ ಭಾಷೆ ಅಧ್ಯಯನದಲ್ಲಿ ಹಾಗೂ ಅದರ ತರಗತಿಯಿಂದ ವಿನಾಯಿತಿ ನೀಡಲಾಗಿದೆ.

**8.** ಪೋಷಕರ / ಎಸ್.ಡಿ.ಎಂ.ಸಿ ರವರ ಸಹಯೋಗದಲ್ಲಿ 9ನೇ ತರಗತಿಯಲ್ಲಿ ಪ್ರಾರಂಭವಾಗುವ ಸೆಕ್ಟರ ವಿಷಯಕ್ಕೆ ಸಂಬಂಧಿಸಿದಂತೆ ಪಾಲಕ-ಪೋಷಕರ ಬೆಂಬಲ ಹಾಗೂ ಒಪ್ಪಿಗೆಯನ್ನು ಸಂಬಂಧಿಸಿದ ಮುಖ್ಯ ಶಿಕ್ಷಕರು ಪಡೆಯತಕ್ಕದ್ದು.

**9.** 2024-25 ನೇ ಶೈಕ್ಷಣಿಕ ಸಾಲಿನಿಂದ NSQF ತರಗತಿಗಳು ಆರಂಭವಾಗುತ್ತಿರುವ ಶಾಲೆಗಳಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಅಂದರೆ ಗರಿಷ್ಠ 50 ಹಾಗೂ ಒಂದು ತರಗತಿಗೆ/ವಿಷಯ ಪ್ರಾರಂಭಿಸಲು ಬೇಕಾಗುವ ಕನಿಷ್ಠ 20 ವಿದ್ಯಾರ್ಥಿಗಳ ದಾಖಲಾತಿಯ ಗುರಿಯನ್ನು ಸಾಧಿಸಲು ಹೆಚ್ಚು ಪ್ರಚಾರ ಮಾಡುವುದು. ವಿಭಾಗದ ಎಲ್ಲಾ ಉಪ ನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸದರಿ ಶಾಲಾ ಮುಖ್ಯ ಶಿಕ್ಷಕರು ಈ ನಿಟ್ಟಿನಲ್ಲಿ ಸಕ್ರಿಯರಾಗಬೇಕು.

**10.** ಮೂಲಭೂತ ಸೌಲಭ್ಯಗಳನ್ನು ಶಾಲಾ ಹಂತದಲ್ಲಿ ಒದಗಿಸಿಕೊಳ್ಳುವುದು ಅರ್ಹ ಶಾಲೆಗಳಲ್ಲಿ ಕಡ್ಡಾಯವಾಗಿದೆ. ಮಾಹಿತಿ ತಂತ್ರಜ್ಞಾನ (ಐ.ಟಿ) ವಿಷಯ ಬೋಧನೆಗೆ ಅವಶ್ಯವಿರುವ ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಸೌಲಭ್ಯ, ಅಂತರಜಾಲದ ಸೌಲಭ್ಯ (ಲ್ಯಾನ್) ಮತ್ತು ಪ್ರತಿ ವಿದ್ಯಾರ್ಥಿಗೆ ಒಂದರಂತೆ ಕಾರ್ಯನಿರ್ವಹಿಸುವ ಒಂದು ಕಂಪ್ಯೂಟರ್ ಸೌಲಭ್ಯವನ್ನು ಒದಗಿಸತಕ್ಕದ್ದು. ಇನ್ನತರೆ ಅವಶ್ಯಕ ಸೌಲಭ್ಯಗಳನ್ನು ಒದಗಿಸಲು ತಮ್ಮ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ರವರಿಂದ ಸಹಾಯ ಹಸ್ತವನ್ನು ಪಡೆಯಲು ತಿಳಿಸಿದೆ.

ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ECCE, ದ್ವಿಭಾಷಾ ತರಗತಿಗಳು ಹಾಗೂ NSQF ವಿಷಯವು ಬಹಳ ಪರಿಣಾಮಕಾರಿಯಾಗಲಿವೆ. ಇದರಿಂದಾಗಿ ಸರ್ಕಾರಿ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಯಾಗುವುದಲ್ಲದೇ ಶಾಲೆಗಳಲ್ಲಿ ದಾಖಲಾತಿ ಸಹ ವೃದ್ಧಿಯಾಗಲಿದೆ. ಆದ್ದರಿಂದ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಈ ತರಗತಿಗಳನ್ನು ಅರ್ಹ ಶಾಲೆಗಳಲ್ಲಿ ಕಾರ್ಯರೂಪಕ್ಕೆ ಬರುವಂತೆ ಕೂಡಲೇ ಕ್ರಮವಹಿಸುವುದು.

13.05.2024.

**(ಡಾ. ಆಕಾಶ್.ಎಸ್, ಭಾ.ಆ.ಸೇ)**
**ಅಪರ ಆಯುಕ್ತರು,**
ಶಾಲಾ ಶಿಕ್ಷಣ ಇಲಾಖೆ
ಕಲಬುರಗಿ ವಿಭಾಗ, ಕಲಬುರಗಿ

**ಪ್ರತಿಗಳನ್ನು:**

1. ವಿಭಾಗದ ಎಲ್ಲಾ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರವರಿಗೆ.
2. ವಿಭಾಗದ ಎಲ್ಲಾ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು (ಆಡಳಿತ) ರವರಿಗೆ.
3. ವಿಭಾಗದ ಎಲ್ಲಾ ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರಿಗೆ.

**ಪ್ರತಿಗಳನ್ನು ಮಾಹಿತಿಗಾಗಿ ಸಲ್ಲಿಸಿದೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು.
2. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
3. ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ, ಕಲಬುರಗಿ.
4. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
5. ವಿಭಾಗದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.
6. ಕಛೇರಿ ಪ್ರತಿ.